**Spl.C.5092/2021**
**PW.5 CW.5 Ganapathi**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5092/2021**

**ಪ್ರಾಸಾ -- 5**

**ಚಾಸಾ – 5**

ಸಾಕ್ಷಿಯ ಹೆಸರು – ಗಣಪತಿ
ಗಂಡನ ಹೆಸರು – ಕುಶಾಲಪ್ಪ
ವಯಸ್ಸು – 67 ವರ್ಷ
ವೃತ್ತಿ – ರೈತ
ವಿಳಾಸ – ಕುಮಟೂರು

ದಿಃ 21.08.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ಪ್ರಾಸಾ 1 ರಿಂದ 4 ಗೊತ್ತು, ಅವರು ನಮ್ಮ ತೋಟದಲ್ಲಿ ಕೆಲಸ ಮಾಡುತ್ತಾರೆ. ಒಂದನೇ ಆರೋಪಿ ನನ್ನ ಅಣ್ಣನ ಮಗ, ಉಳಿದ ಆರೋಪಿತರು ನಮ್ಮ ಪಕ್ಕದ ಗ್ರಾಮದವರು.

2. ದಿನಾಂಕ 12.07.2021 ರಂದು ತೋಟದ ಕಾರ್ಮಿಕರ ನಡುವೆ ಗಲಾಟೆ ಆಗಿತ್ತು. ಆ ವಿಚಾರದಲ್ಲಿ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಅದೇ ದಿನ ಸಂಜೆ ಕುಟ್ಟ ಪೊಲೀಸರು ಠಾಣೆಗೆ ವಿಚಾರಣೆಗಾಗಿ ಬರುವಂತೆ ತಿಳಿಸಿದರು.

3. ದಿನಾಂಕ 13.07.2021 ರಂದು ನಾನು, ಪ್ರಾಸಾ 1 ಮತ್ತು 2 ರವರು ಕುಟ್ಟ ಪೊಲೀಸ್ ಠಾಣೆಗೆ ಹೋಗಿದ್ದು, ಪ್ರಾಸಾ 2 ರವರ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಮ್ಮನ್ನು ವಿಚಾರಣೆ ಮಾಡಿದ್ದಾರೆ. ಪೊಲೀಸ್ ಠಾಣೆಯಿಂದ ನಾವು ವಾಪಸ್ಸು ಮನೆಗೆ

ಬರುತ್ತಿದ್ದೇವು.

4. ನಮ್ಮ ಮನೆಯಿಂದ 300 ಮೀಟರ್ ದೂರದಲ್ಲಿ ಜಂಕ್ಷನ್ ನಲ್ಲಿ ಆರೋಪಿತರು ಬಂದು ಆಟೋ ರಿಕ್ಷಾವನ್ನು ತಡೆದು ನಿಲ್ಲಿಸಿದರು. ಎರಡೂ ಕಡೆಯಿಂದ ಬಂದು ಪ್ರಾಸಾ 1 ಮತ್ತು 2 ರವರನ್ನು ಹಲ್ಲೆ ಮಾಡುತ್ತಿದ್ದರು, ನಾನು ತಡೆಯಲು ಹೋದೆ, ನನ್ನನ್ನು ಅಡ್ಡ ಹಾಕಿರುತ್ತಾರೆ. ಗದ್ದಲ ಆಗಿದ್ದರಿಂದ ಪ್ರಾಸಾ 3 ಮತ್ತು 4 ರವರು ಬಂದರು. ಸದರಿಯವರಿಗೂ ಸಹ ಹಲ್ಲೆ ಮಾಡಿದ್ದಾರೆ. ನಂತರ ಪೊಲೀಸ್ ಜೀಪಿನಲ್ಲಿ ಸ್ಥಳಕ್ಕೆ ಬಂದಿದ್ದಾರೆ. ಅದೇ ದಿನ ಪೊಲೀಸ್ ಠಾಣೆಗೆ ಹೋಗಿದ್ದೆ. ಪ್ರಾಸಾ 1 ರಿಂದ 4 ರವರು ಸಹ ಬಂದಿದ್ದರು, ಪ್ರಕರಣ ದಾಖಲಿಸಿದ್ದಾರೆ. ಆ ದಿನ ವೈದ್ಯರಿಲ್ಲದ ಕಾರಣ ಬೆಳಿಗ್ಗೆ ಬರುವಂತೆ ಹೇಳಿ ಕಳುಹಿಸಿದ್ದಾರೆ.

5. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ. ನಾನು ಪೊನ್ನಂಪೇಟೆ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಸಹ ನೀಡಿದ್ದೇನೆ. ಹೇಳಿಕೆಯನ್ನು **ನಿಪಿ 8, 8(ಎ)** ನನ್ನ ಸಹಿ. ನಿಪಿ 3 ರಲ್ಲಿ ಕಾಣುವಂತಹ ಸ್ಥಳದಲ್ಲಿ ಘಟನೆ ನಡೆದಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

6. ಆರೋಪಿತರು ಪ್ರಾಸಾ 1 ರಿಂದ 4 ರವರಿಗೆ ಯರವ ಸೂಳೆ ಮಕ್ಕಳು ಎಂದು ಬೈದು, ಜಾತಿನಿಂದನೆ ಮಾಡಿದ್ದಾರೆ ಎಂದು

ಹೇಳಿದ್ದೇನೆ. ಆರೋಪಿತರು ಪ್ರಾಸಾ 3 ಮತ್ತು 4 ರವರನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಚ್ಯುತಿ ಉಂಟು ಮಾಡಿದ್ದಾರೆ ಎಂದು ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ 9, 9(ಎ)** ಎಂದು ಗುರುತಿಸಲಾಯಿತು. ಕಾವೇರಪ್ಪ ಜಗಳ ಬಿಡಿಸಿದ್ದಾರೆ ಎಂದರೆ ಸರಿ. ನಾನು ಸಮಾಧಾನ ಮಾಡಿದರೂ ಸಹ ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ವಿ ಎಸ್ ಪಿ ಆರೋಪಿ ಪರ ವಕೀಲರಿಂದ**

7. ಪ್ರಾಸಾ 2 ಹಾಗೂ ರವಿ ರವರ ನಡುವೆ ನಡೆದಂತಹ ಗಲಾಟೆಗೂ, ಈ ಪ್ರಕರಣಕ್ಕೂ ಸಂಬಂಧ ಇದೆಯೋ ಇಲ್ಲವೋ ಗೊತ್ತಿಲ್ಲ. ಪ್ರಾಸಾ 1 ಮತ್ತು 2 ರವರಿಗೆ ಹಲ್ಲೆ ಮಾಡುವಾಗ ನಾನು ಆಟೋದಲ್ಲೇ ಇದ್ದೆ. ಗುಂಪಿನಲ್ಲಿ ಹಲ್ಲೆ ಮಾಡಿದ್ದಾರೆ, ನಿರ್ದಿಷ್ಟವಾಗಿ ಯಾರು ಎಂದು ಹೇಳಲಾಗುವುದಿಲ್ಲ. ನನಗೆ ಕಾಣುವಂತೆ ರಕ್ತದ ಗಾಯಗಳಾಗಿಲ್ಲ.

8. ಪ್ರಾಸಾ 1 ಮತ್ತು 2 ರವರು ಎಲ್ಲಿಗೂ ಹೋಗಲಿಲ್ಲ, ಅಲ್ಲಿಯೇ ಇದ್ದರು. 20 ನಿಮಿಷದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದಾರೆ. ಘಟನೆಯ ವಿಚಾರವನ್ನು ತಿಳಿಸಿದ್ದಾರೆ, ಆದರೆ ಬರವಣಿಗೆ ಮಾಡಿಕೊಂಡಿಲ್ಲ. ಸ್ಥಳವನ್ನು ನಾನು ತೋರಿಸಿಲ್ಲ, ಪೊಲೀಸರೇ ಬಂದು ನೋಡಿದ್ದಾರೆ. ಪಿ ಎಸ್ ಐ ರವರು ಸ್ಥಳಕ್ಕೆ ಬಂದಿದ್ದರು. 112 ಪೊಲೀಸ್ ವಾಹನ ಸಹ ಬಂದಿತ್ತು. ಪೊಲೀಸರು ಬಂದಾಗ ಸಾಕಷ್ಟು ಜನ ಸೇರಿದ್ದರು, ಅವರನ್ನು ವಿಚಾರ ಮಾಡಿಲ್ಲ. ಆ ದಿನ ಮಹಜರ್ ಮಾಡಿಲ್ಲ.

9. 5-10 ನಿಮಿಷದಲ್ಲಿ ಗಲಾಟೆ ಮುಗಿದಿದೆ. ನಮಗೂ ಹಾಗೂ ಒಂದನೇ ಆರೋಪಿ ಕುಟುಂಬದ ನಡುವೆ ಭಿನ್ನಾಭಿಪ್ರಾಯವಿಲ್ಲ. ನನ್ನ ಎರಡನೇ ತಮ್ಮ ಸೋಮಣ್ಣರವರ ಆಸ್ತಿಯನ್ನು ಒಂದನೇ ಆರೋಪಿಯವರು ಖರೀದಿ ಮಾಡಿದ್ದಾರೆ. ಆ ವಿಚಾರದಲ್ಲಿ ನನಗೂ ಒಂದನೇ ಆರೋಪಿಗೂ ವೈಮನಸ್ಸು ಇದೆ ಎಂದರೆ ಸರಿಯಲ್ಲ.

10. ಊರಿನ ಸಂಘದ ವಿಚಾರದಲ್ಲಿ ನಮಗೂ ಹಾಗೂ ಆರೋಪಿಗಳ ನಡುವೆ ಸಂಘರ್ಷ ಆಗಿತ್ತು ಎಂದರೆ ಸರಿಯಲ್ಲ. ಸದರಿ ವಿಚಾರದಲ್ಲಿ ನಮಗೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. 2018 ರವರೆಗೆ ನೌಕರಿಯಲ್ಲಿ ಇದ್ದು, ನಿವೃತ್ತಿಯ ನಂತರ ನಾನು ತೋಟದಲ್ಲಿ ವಾಸವಿದ್ದೇನೆ. ಆರೋಪಿತರು ಪ್ರಾಸಾ 1 ಮತ್ತು 2 ರವರಿಗೆ ಕೊಡವ ಭಾಷೆಯಲ್ಲಿ ಬೈದಿದ್ದಾರೆ. ಆ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ. ನಾನು ಹೇಳಿದಂತೆ ನಾಯಾಧೀಶರು ಹೇಳಿಕೆ ಮಾಡಿಕೊಂಡು ಮನವರಿಕೆ ಮಾಡಿದ್ದಾರೆ. ನಾನು ಆರೋಪಿತರ ವಿರುದ್ಧ ವೈಮನಸ್ಸಿನಿಂದ ಪ್ರಾಸಾ 1 ರಿಂದ 4 ರವರಿಂದ ಸುಳ್ಳು ಕೊಡಿಸಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)